# ಅಲಕ ತೀರ್ಥಹಳ್ಳಿ

ಕಲೆ: ಡಿ.ಕೆ. ರಮೇಶ್



ಪರಿಣತಿ ಯಾವಾಗಲೂ ಒಬ್ಬಂಟಿಯಾದವಳೇ ಅಲ್ಲ. ಮದುವೆಗೂ ಮೊದಲು ಮತ್ತು ಅನಂತರವೂ ಆತ್ಮೀಯರ ದಂಡೇ ಅವಳ ಜೊತೆಗಿತ್ತು; ಇವತ್ತಿಗೂ ಇದೆ. ಮತ್ತೊಮ್ಮೆ ಮದುವೆಯಂತಹ ವಿಚಾರವನ್ನೇ ಮುಖ್ಯವಾಗಿ ಮಾತಾಡುವುದಿದ್ದರೆ ಅವಳಿಗೆ ತನ್ನ ಅಕ್ಕನಿಗಿಂತಲೂ ಹತ್ತಿರದ ಗೆಳತಿಯೊಬ್ಬಳಿದ್ದಾಳೆ. ಅವಳೇ ಸೂರ್ಯಮಣಿ. ಇವರಿಬ್ಬರೂ ಇಪ್ಪತ್ತು ವರ್ಷಗಳಿಂದಲೂ ಕೊರಳ ಗೆಳತಿಯರು. ಇವರದು ತರ್ಕಕ್ಕೆ ಸಿಗದ ವಿಚಿತ್ರ ಬಂಧ! ಇವರು ಹತ್ತು ನಿಮಿಷ ಮಾತನಾಡಿದರು ಎಂದಾದರೆ, ಅದರಲ್ಲಿ ಎಂಟು ನಿಮಿಷವಾದರೂ ವಾದವೇ ಇರುತ್ತದೆ. ಇವರಿಬ್ಬರೂ ಸೇರಿದರೆಂದರೆ, ಎರಡು ಧ್ರುವಗಳು ಸೇರಿದಂತೆ! ಇವಳು ಹಿಮವಾದಾಗ ಅವಳು ಅಗ್ನಿಯಾಗುತ್ತಾಳೆ; ಇವಳು ಕುಸುಮವಾದಾಗ ಅವಳು ಕಲ್ಲಾಗುತ್ತಾಳೆ. ಇಂತಹ ವಿಲಕ್ಷಣ ಗೆಳೆತನ ಇಬ್ಬರೂ ನವೋದಯ ಶಾಲೆಯಲ್ಲಿ ಓದುತ್ತಿದ್ದಾಗ ಶುರುವಾದದ್ದು, ಇವತ್ತಿನವರೆಗೂ ಅಷ್ಟೇ ಹಸಿರಾಗಿ ಉಳಿದಿರುವುದೆಂದರೆ ವಿಸ್ಮಯದಲ್ಲಿ ವಿಸ್ಮಯವಲ್ಲವೇ!

ಸೂರ್ಯಮಣಿ ತನ್ನ ಕ್ಲಾಸಿನಲ್ಲಿದ್ದ ಕಲಮ್ ಎಂಬ ಹುಡುಗನನ್ನು ಆರು ವರ್ಷಗಳ ಕಾಲ ಪ್ರೀತಿಸಿ ಅಂತೂ ಕೊನೆಗೆ ಮದುವೆಯಾಗಿದ್ದಳು. ಆಮೇಲೆ ಇದ್ದಕ್ಕಿದ್ದಂತೆ ಅವಳ ಫೋನ್ ಸ್ವಿಚ್‌ಆಫ್ ಆಗಿತ್ತು. ಕೊನೆಗೊಮ್ಮೆ ಅವಳೇ ಮೆಸೇಜ್ ಮಾಡಿದ್ದಳು. 'ನಾನು ಆರಾಮಾಗಿದ್ದೇನೆ. ಮದುವೆ ವಿಚಾರ ಒಂದು ಬಿಟ್ಟು ಮತ್ತೇನಾದರೂ ಇದ್ದರೆ ಮಾತ್ರ ಫೋನ್ ಮಾಡು ಅಷ್ಟೇ.' ಪರಿಣತಿಗೆ ಅದೊಂದು ವಿಚಾರದ ಹೊರತಾಗಿ ಮಾತನಾಡಲು ಮತ್ತೇನೂ ಇರಲಿಲ್ಲ; ಮಾತನಾಡಲಿಲ್ಲ. ಹೀಗೊಮ್ಮೆ ಸೂರ್ಯಮಣಿಯೇ ಇದ್ದಕ್ಕಿದ್ದಂತೆ ಫೋನ್ ಕೂಡ ಮಾಡದೇ ಇವಳ ಮನೆಗೆ ಬಂದುಬಿಟ್ಟಳು, ಜೊತೆಗೊಬ್ಬ ದೈತ್ಯ ರಾಜಕುಮಾರ!

ಯಾವತ್ತಿನಿಂದಲೂ ಅವಳನ್ನು ಬಲ್ಲ ಪರಿಣತಿಗೆ ಆಶ್ಚರ್ಯವೇನೂ ಆಗಲಿಲ್ಲ. ಅವಳು ಒಮ್ಮೆ ಹೇಳಿದ್ದಳು: ತನಗೆ **Dating App** ಮೂಲಕ ಗೆಳೆಯನೊಬ್ಬ ಸಿಕ್ಕಿದ್ದಾನೆ; ತಾವು ಪ್ರತಿ ವಾರಾಂತ್ಯದಲ್ಲಿ ತಪ್ಪದೆ, ತಿಂಗಳಿಗೆ ಐದಾರು ಬಾರಿಯಾದರೂ ದೊಡ್ಡ ಹೋಟೆಲಿನಲ್ಲಿ ಭೇಟಿಯಾಗುತ್ತೇವೆ; ಬೇಕೆನಿಸಿದ್ದನ್ನು ತಿಂದು–ಕುಡಿದು, ಏಕಾಂತದಲ್ಲಿ ಮಧುರಕ್ಷಣಗಳನ್ನು ಕಳೆದು, ಆಮೇಲೆ ತಮ್ಮ ತಮ್ಮ ಮನೆಗಳಿಗೆ ಹೋಗಿಬಿಡುತ್ತೇವೆ. ಮೈಮುರಿ ಕೆಲಸದ ಆಯಾಸವನ್ನು ಯಾವುದೇ ಬಂಧದ ಗೋಜಲು,